ಬಾಲಿವುಡ್

# ಪೂರ್ಣ ಸತ್ಯ

**ಓಂಪುರಿ ಭಾರತೀಯ ಚಿತ್ರರಂಗ ಕಂಡ ಅದ್ಭುತ ನಟ. ಹೀರೊ ಪಾತ್ರಗಳು ಸಿಗದಿದ್ದರೂ ಹೀರೊ ಆಗಿ ಮಿಂಚಿದ ಅಭಿಜಾತ ಪ್ರತಿಭೆ.**



ರಾಷ್ಟ್ರೀಯ ನಾಟಕ ಶಾಲೆಯಲ್ಲಿ (ಎನ್‌ಎಸ್‌ಡಿ) ಅದು ಮಹಾನ್ ಪ್ರತಿಭೆಗಳು ಒಂದೆಡೆ ಸೇರಿದ್ದ ಕಾಲ. ಇಂಗ್ಲಿಷ್ ಮಾತನಾಡಲು ಹಿಂಜರಿಯುವ ಗ್ರಾಮೀಣ ಮಕ್ಕಳಂತೆಯೇ ತಮ್ಮಲ್ಲಿನ ಪ್ರತಿಭೆಯನ್ನು ಧೈರ್ಯವಾಗಿ ಹೊರಹಾಕಲು ಹಿಂದೇಟು ಹಾಕುತ್ತಿದ್ದ ಯುವಜನರ ತಂಡವದು. ಅದರ ನಡುವೆಯೇ ಪರಸ್ಪರ ಬೆನ್ನುತಟ್ಟಿಕೊಂಡು, ಧೈರ್ಯ ತುಂಬಿಕೊಂಡು ಕಲಿತರು. ತನಗೆ ಇಂಗ್ಲಿಷ್ ಬರುವುದಿಲ್ಲ, ಹಿಂದಿ ಬರುವುದಿಲ್ಲ ಎಂಬ ಕೊರಗನ್ನು ಸೋಲು ಎಂದು ಪರಿಗಣಿಸದೆ ಸವಾಲಾಗಿ ಸ್ವೀಕರಿಸಿದರು. ಅದರಲ್ಲೊಬ್ಬ ಉತ್ಸಾಹಿಗೆ ತಾನೊಬ್ಬ ಅತ್ಯುತ್ತಮ ನಟ ಎನಿಸಿಕೊಳ್ಳಬೇಕೆಂಬ ತುಡಿತ.

ನಾಟಕವೊಂದರ ಮುಖ್ಯಪಾತ್ರದಲ್ಲಿ ಅದ್ಭುತವಾಗಿ ನಟಿಸಿದ ಅವರನ್ನು ಸಹಪಾಠಿಗಳು 'ಹೀರೊ' ಎಂದು ತಮಾಷೆಯಾಗಿ ಕರೆಯುತ್ತಿದ್ದರು. 'ನಾನು ಹೀರೊ ಆಗಲಾರೆ. ನಟನಾಗಬೇಕು' ಎಂದು ಅಷ್ಟೇ ವಿನಮ್ರದಿಂದ ಹೇಳುತ್ತಿದ್ದ ಅವರಿಗೆ, ಹೀರೊ ಆಗುವುದು ಅಸಾಧ್ಯ ಎಂಬುದಕ್ಕೆ ಕಾರಣವೂ ಗೊತ್ತಿತ್ತು. ಪ್ರತಿಭೆಯೊಂದಕ್ಕೇ ಚಿತ್ರರಂಗ ಮಣೆ ಹಾಕುವುದಿಲ್ಲ. ನಾಯಕ ಎನಿಸಿಕೊಂಡವನು ಸುಂದರನೂ ಆಗಿರಬೇಕು. ಬಾಲ್ಯದಲ್ಲಿ ಕಾಡಿದ ದಡಾರದಿಂದ ಮುಖದಲ್ಲಿ ಉಳಿದುಕೊಂಡ ಕಲೆಗಳು ಅವರ ಕನಸಿಗೆ ಅಡ್ಡಿಯಾಗಿದ್ದವು. ಆದರೂ ಅವರು ಹೀರೊ ಆದರು. ಅವರು 'ಹೀರೊಯಿಸಂ' ಇಲ್ಲದ ಹೀರೊ. ಸಿನಿಮಾಗಳಲ್ಲಿ ಮಾತ್ರವಲ್ಲ, ನಿಜದ ಬದುಕಿನಲ್ಲಿಯೂ. ಆದರೆ, ಕೊನೆಯ ಕೆಲವು ದಿನಗಳಲ್ಲಿ ಕೌಟುಂಬಿಕ ಬದುಕಿನ ವಿವಾದ ಅವರನ್ನು 'ಖಳನಾಯಕ'ನಂತೆಯೂ ಚಿತ್ರಿಸಿದ್ದು ವಿಪರ್ಯಾಸ.

ಜನವರಿ 7ರಂದು ನಿಧನರಾದ ಓಂ ಪುರಿ ಎಂಬ ಮೇರು ಪ್ರತಿಭೆಯ ವ್ಯಕ್ತಿತ್ವ ಮತ್ತು ಸಿನಿಮಾ ಎರಡೂ ವಿಶಿಷ್ಟ. ಅಪ್ಪ ಸೇನೆಯಲ್ಲಿದ್ದವರು. ಸೇನೆಗೂ ಸಿನಿಮಾಕ್ಕೂ ಎಲ್ಲಿಯ ನಂಟು? ಆದರೆ, ಅಪ್ಪನಂತೆಯೇ ಮಗನೂ ಶಿಸ್ತಿನ ಸಿಪಾಯಿ. ಶೂಟಿಂಗ್‌ಗೆ ಐದು ನಿಮಿಷವೂ ತಡವಾಗಿ ಹಾಜರಾಗುತ್ತಿದ್ದವರಲ್ಲ. ಕ್ಯಾಮೆರಾ ಎದುರು ನಿಂತರೆ 'ಇನ್ನೊಂದು ಟೇಕ್' ಎಂದು ಕೇಳುತ್ತಿದ್ದವರಲ್ಲ. ಎಷ್ಟೇ ಭಾವಾಭಿನಯ ಬೇಡುವ, ಸುದೀರ್ಘ ದೃಶ್ಯವಾಗಿದ್ದರೂ ಒಂದೇ ಟೇಕ್‌ನಲ್ಲಿ ಮುಗಿಸುವ ಅಗಾಧ ಶಕ್ತಿ, ಏಕಾಗ್ರತೆ ಅವರಲ್ಲಿತ್ತು. ಪಾತ್ರವೆಂದರೆ, ಅದು ಅವರ ಜೀವನವೂ ಆಗಿತ್ತು.

ಓಂ ಪುರಿ ನಟಿಸಿದ ಚಿತ್ರಗಳನ್ನೇ ನೋಡಿ; 'ಅರ್ಧ ಸತ್ಯ', 'ಸದ್ಗತಿ', 'ಆರೋಹಣ್', 'ಭೂಮಿಕಾ', ಕನ್ನಡದ 'ತಬ್ಬಲಿಯು ನೀನಾದೆ ಮಗನೆ' ಇವೆಲ್ಲವೂ ಹೊಸ ಅಲೆಯ ಪ್ರಭೆಯಲ್ಲಿ ಮೂಡಿದ ಚಿತ್ರಗಳು. ಓಂ ಪುರಿ ಎಂಬ ಅದ್ಭುತ ಪ್ರತಿಭೆಗೆ ಈ ಚಿತ್ರಗಳು ಸಾಣೆ ಹಿಡಿದವು. ವ್ಯಾಪಾರಿ ಸಿನಿಮಾಗಳಲ್ಲಿಯೂ ಓಂ ಪುರಿ ತಮ್ಮ ಗಾಂಭೀರ್ಯವನ್ನು ಬಿಟ್ಟುಕೊಟ್ಟವರಲ್ಲ. 'ಸೀಪಿಯಾನ್'ನಂತಹ ಚಿತ್ರದಲ್ಲಿ ರೊಮ್ಯಾಂಟಿಕ್ ದೃಶ್ಯಗಳಲ್ಲಿ ಕಾಣಿಸಿಕೊಳ್ಳಲೂ ಮುಜುಗರ ಪಡಲಿಲ್ಲ. ಸಿನಿಮಾ ಬಯಸಿದ್ದನ್ನು ಕೊಡುವುದರಲ್ಲಿ ಅವರ ತೃಪ್ತಿ ಕಂಡವರು.

ಕನ್ನಡದಲ್ಲಿಯೂ 'ಓಂ' ಹೆಜ್ಜೆ ಗುರುತು ಅವಿಸ್ಮರಣೀಯ. ಶಿವರಾಜ್‌ಕುಮಾರ್ ನಾಯಕರಾಗಿದ್ದ 'ಎ.ಕೆ. 47' ಚಿತ್ರದ ಮಾನವೀಯ ಮುಖದ ಖಡಕ್ ಪೊಲೀಸ್ ಅಧಿಕಾರಿಯಾಗಿ, ಸ್ವತಃ ಕನ್ನಡದಲ್ಲಿ ತಾನೇ ಡಬ್ ಮಾಡಿದ್ದು ಅವರ ಸಿನಿಮಾ ಪ್ರೀತಿಗೆ ಸಾಕ್ಷಿ. ದರ್ಶನ್ ಅಭಿನಯದ 'ಧ್ರುವ'ದಲ್ಲಿಯೂ ವಿದ್ಯಾರ್ಥಿಯನ್ನು ತಿದ್ದುವ ಅವರ ಪಾತ್ರ ಗಮನ ಸೆಳೆಯಿತು. ಇತ್ತೀಚೆಗೆ ತೆರೆಕಂಡ 'ಸಂತೆಯಲ್ಲಿ ನಿಂತ ಕಬೀರ' ಚಿತ್ರದ ಸಣ್ಣ ಪಾತ್ರ ಮತ್ತೆ ಅವರನ್ನು ಕನ್ನಡದ ಮಣ್ಣಿಗೆ ಕರೆತಂದಿತ್ತು. ಬಿಡುಗಡೆಗೆ ಸಿದ್ಧವಾಗಿರುವ 'ಟೈಗರ್' ಚಿತ್ರದ ಮೂಲಕ ಕನ್ನಡ ಸಿನಿಮಾ ನೆಲದಲ್ಲಿನ ಅವರ ಕೊನೆಯ ಹೆಜ್ಜೆಯನ್ನು ನಾವು ಕಾಣಬಹುದು.

ಸಿನಿಮಾ ಹೊರತಾಗಿ ಅವರನ್ನು ಸೆಳೆಯುತ್ತಿದ್ದದ್ದು ರಂಗಭೂಮಿ ಮತ್ತು ಸಾಹಿತ್ಯ. ರಾಜಕೀಯದಿಂದ ದೂರವೇ ಉಳಿದಿದ್ದ ಅವರು, ತಮ್ಮ ಓರಗೆಯ ಕಲಾವಿದರಿಗಿಂತ ವಿಭಿನ್ನವಾಗಿ ಕಂಡಿದ್ದು, ಯಾವುದೇ ಸಿನಿಮೇತರ ಘಟನೆಗಳಿಗೆ ಪ್ರತಿಕ್ರಿಯೆ ನೀಡದ ಕಾರಣಕ್ಕೆ. ನಟನೆಯ ಹೊರತಾಗಿ ಅವರೊಬ್ಬ ಅಂತರ್ಮುಖಿ. ಅಭಿನಯದ ಜತೆಗೆ ತಮ್ಮ ವ್ಯಕ್ತಿತ್ವದ ಕಾರಣದಿಂದಲೂ ಜನರಿಗೆ ಹತ್ತಿರವಾದ ನಟ ಟೀಕೆಗೆ ಒಳಗಾಗಿದ್ದು, ಕೌಟುಂಬಿಕ ದೌರ್ಜನ್ಯ ಆರೋಪ ಹೊತ್ತಾಗ. ಎರಡನೆಯ ಪತ್ನಿ ನಂದಿತಾ, ಅವರ ಬದುಕನ್ನು 'ಅನ್‌ಲೈಕ್ಲಿ ಹೀರೊ: ದಿ ಸ್ಟೋರಿ ಆಫ್ ಓಂ ಪುರಿ' ಪುಸ್ತಕದಲ್ಲಿ ಅವರ ಹಿಂದಿನ ಸಂಬಂಧಗಳ ಬಗ್ಗೆ ಬರೆದದ್ದು, ಓಂ ಪುರಿಯ ಆಕ್ರೋಶಕ್ಕೆ ಕಾರಣವಾಯಿತು. ನಂದಿತಾಳಿಂದಲೂ ದೂರವಾದ ಬಳಿಕ ಓಂ ಮಾನಸಿಕವಾಗಿ ಕುಗ್ಗಿದ್ದರು. ಚಿತ್ರೀಕರಣ ಮುಗಿಸಿ ಮನೆಗೆ ಮರಳಿ ಮಲಗಿದ್ದ ಅವರು ಬೆಳಿಗ್ಗೆ ಎದ್ದಿರಲಿಲ್ಲ. ಭಾಷೆ, ಪಾತ್ರಗಳಿಗೆ ಮಿತಿ ಹಾಕಿಕೊಳ್ಳದ ದೈತ್ಯ ಪ್ರತಿಭೆಯೊಂದು ಹೀಗೆ ಕಣ್ಮರೆಯಾಗಿದ್ದು ಜೀರ್ಣಿಸಿಕೊಳ್ಳಲಾಗದ ಪೂರ್ಣಸತ್ಯ.

■ **ಅಮಿತ್ ಎಂ.ಎಸ್.**